

# ‘ಮಾಸ್ಟರ್’ಗೂ ಬಾಲಿವುಡ್ ಗಾಳ

ವಿಶಾಖ ಎನ್.

ದಕ್ಷಿಣ ಭಾರತದ ಚಿತ್ರಗಳ ಕಡೆಗೆ ಸದಾ ಒಂದು ಕಣ್ಣಿಟ್ಟು, ಗಬಕ್ಕನೆ ರೀಮೇಕ್ ಹಕ್ಕುಗಳನ್ನು ಗಿಟ್ಟಿಸಿಕೊಳ್ಳುವುದರಲ್ಲಿ ಕರಣ್ ಜೋಹರ್ ನಿಸ್ಸೀಮರು. ‘ಬಾಹುಬಲಿ’ ತೆಲುಗು ಚಿತ್ರದ ಹಿಂದಿ ಡಬ್ಡ್ ವರ್ಷನ್‌ನಲ್ಲೇ ನೂರಾರು ಕೋಟಿ ಲಾಭ ಜೇಬಿಗಿಳಿಸಿದ ವ್ಯವಹಾರ ಚತುರ. ತೆಲುಗಿನದ್ದೇ ‘ಟೆಂಪರ್’ ಸಿನಿಮಾವನ್ನು ‘ಸಿಂಬಾ’ ಆಗಿಸಿ ಗೆದ್ದವರು. ಈಗ ಅವರನ್ನು ಓವರ್‌ಟೇಕ್ ಮಾಡಿ, ‘ಮಾಸ್ಟರ್’ ತಮಿಳು ಚಿತ್ರದ ರೀಮೇಕ್ ಹಕ್ಕನ್ನು ಮೂರು ದೊಡ್ಡ ನಿರ್ಮಾಣ ಸಂಸ್ಥೆಗಳು ಗಿಟ್ಟಿಸಿವೆ. ಎಂಡೆಮೋಲ್ ಶೈನ್ ಇಂಡಿಯಾ, ಸಿನಿ 1(ಇದೇ ಕಂಪನಿಯ ಮುರಾದ್ ಖೇತಾನಿ ‘ಕಬೀರ್ ಸಿಂಗ್’ ಹಿಂದಿ ರೀಮೇಕ್ ನಿರ್ಮಿಸಿ, 400 ಕೋಟಿ ರೂಪಾಯಿಯಷ್ಟು ವಹಿವಾಟು ನಡೆಸಿದರು) ಹಾಗೂ 7 ಸ್ಕ್ರೀನ್ಸ್ ಕಂಪನಿಗಳು ಜನವರಿ 22ರಂದು ರೀಮೇಕ್ ಹಕ್ಕು ಪಡೆದುಕೊಂಡ ಸಂಗತಿಯನ್ನು ಸ್ಪಷ್ಟಪಡಿಸಿವೆ.

ಒಂದು ಮೂಲದ ಪ್ರಕಾರ ರೀಮೇಕ್ ಹಕ್ಕಿಗೇ 6 ಕೋಟಿ ರೂಪಾಯಿಯನ್ನು ಈ ಕಂಪನಿಗಳು ಭರಿಸಿವೆ. ಹಿಂದಿ ಚಿತ್ರರಂಗವು ತಾಜಾ ಆದ ಕಥಾವಸ್ತುಗಳು ಹಾಗೂ ನಿರೂಪಣಾ ವೈವಿಧ್ಯಕ್ಕೆ ದಕ್ಷಿಣ ಭಾರತದ ಚಿತ್ರಗಳ ಕಡೆಗೆ ಮುಖಮಾಡತೊಡಗಿ ವರ್ಷಗಳೇ ಆಗಿವೆ. ಈಗ ‘ಮಾಸ್ಟರ್’ ಕೋವಿಡೋತ್ತರ ಕಾಲದ ಜೀವಾನಿಲದಂತೆ ಎಲ್ಲರಿಗೂ ಕಾಣಿಸುತ್ತಿರುವುದಕ್ಕೆ ಕಾರಣವಿದೆ.

ಲೋಕೇಶ್ ಕನಕರಾಜ್ ನಿರ್ದೇಶನದ ‘ಮಾಸ್ಟರ್’ನಲ್ಲಿ ಸ್ಟಾರ್ ನಟ ವಿಜಯ್ ಇಮೇಜನ್ನು ಹದವರಿತು ಉಜ್ಜಲಾಗಿದೆ. ಜತೆಗೆ ವಿಜಯ್ ಸೇತುಪತಿ ಪವರ್‌ಪ್ಯಾಕ್ಡ್ ಪರ್ಫಾರ್ಮೆನ್ಸ್‌ನ ಬೋನಸ್ಸು. ಬಾಲಾಪರಾಧಿಗಳನ್ನು ಬಳಸಿಕೊಂಡು ರಾವಣನಂತೆ ಮೆರೆಯುವ ಖಳನನ್ನು ಮಟ್ಟಹಾಕುವ ಥ್ರಿಲ್ಲರ್ ಕಥಾನಕದಲ್ಲಿನ ಹಿನ್ನೆಲೆ ಸಂಗೀತ ಚಿತ್ರವನ್ನು ಸಾಕಷ್ಟು ಮೇಲಕ್ಕೆತ್ತಿದೆ. ‘ಕೈದಿ’ ತಮಿಳು ಸಿನಿಮಾ ಮೂಲಕ ಥ್ರಿಲ್ಲರ್ ಅನ್ನು ಎಷ್ಟು ಅಚ್ಚುಕಟ್ಟಾಗಿ ಹೇಳಬಲ್ಲರು ಎನ್ನುವುದನ್ನು ತೋರಿಸಿಕೊಟ್ಟಿರುವ ಲೋಕೇಶ್ ಕನಕರಾಜ್ ಪ್ರತಿಭೆಗೆ ಕಮಲ ಹಾಸನ್ ತರಹದವರೂ ಮನಸೋತಿದ್ದಾರೆ. ಅವರನ್ನೇ ನಾಯಕರನ್ನಾಗಿಸಿ ಹೊಸ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳಲು ಸಜ್ಜಾಗಿರುವ ಲೋಕೇಶ್ ಕಡಿಮೆ ಅವಧಿಯಲ್ಲೇ ಜಗಿತ ಕಂಡವರು. ಈಗ ಬಾಲಿವುಡ್ ಕೂಡ ಅವರನ್ನು ಬೆರಗಿನಿಂದ ನೋಡುತ್ತಿರುವುದು ಇನ್ನೊಂದು ಸಿಹಿಸುದ್ದಿ.



# ಹಂಟರ್ ಬಂದಳು

ವಿಡಿಯೊ ಗೇಮ್‌ಗಳಿಗೆ ಹದಿಹರೆಯದ ಮನಸ್ಸುಗಳು ಒಗ್ಗಿಹೋಗಿವೆ. ಇದನ್ನೇ ಬಂಡವಾಳ ಮಾಡಿಕೊಂಡು ಸಿನಿಮಾ ಮಾಡಿದರೆ ಹೇಗೆ ಎಂದು ಎರಡು ದಶಕಗಳ ಹಿಂದೆಯೇ ಯೋಚಿಸಿದವರು ನಿರ್ದೇಶಕ ಪಾಲ್ ಡಬ್ಲ್ಯು. ಎಸ್. ಆಂಡರ್‌ಸನ್. ‘ಮಾನ್‌ಸ್ಟರ್ ಹಂಟರ್’ ಅಂತಹುದೇ ಯೋಚನೆಯ ಫಲ. ಕಳೆದ ವರ್ಷಾಂತ್ಯದಲ್ಲೇ ಈ ಸಿನಿಮಾ ಚೀನಾ, ಅಮೆರಿಕದಲ್ಲಿ ತೆರೆಕಂಡು, ಜನರಿಗೆ ಮನರಂಜನೆ ನೀಡಿದೆ. ಇದೇ ತಿಂಗಳು ಇಂಗ್ಲೆಂಡ್‌ನ ಜನರೂ ಇದನ್ನು ಕಂಡು ಮೆಚ್ಚಿದ್ದಾರೆ. ಈಗ ಭಾರತದ ಸರದಿ. ಫೆಬ್ರುವರಿ 5ರಂದು ಇಲ್ಲಿನ ಪ್ರೇಕ್ಷಕರೂ ಈ ಚಿತ್ರಕ್ಕಾಗಿ ಕಾದು ಕುಳಿತಿದ್ದಾರೆ.

ಸ್ಕ್ರೀನ್ ಜೆಮ್ಸ್, ಕಾನ್‌ಸ್ಟಾಂಟಿನ್ ಫಿಲ್ಮ್, ಟೆನ್‌ಸೆಂಟ್ ಪಿಕ್ಚರ್ಸ್, ಟೋಹೊ, ಇಂಪ್ಯಾಕ್ಟ್ ಪಿಕ್ಚರ್ಸ್ ಬಂಡವಾಳ ಹೂಡಿರುವ ಈ ಸಿನಿಮಾವನ್ನು ಸೋನಿ ಪಿಕ್ಚರ್ಸ್ ವಿಶ್ವದಾದ್ಯಂತ ವಿತರಿಸುತ್ತಿದೆ. 6 ಕೋಟಿ ಡಾಲರ್ ಬಂಡವಾಳ ವಿನಿಯೋಗಿಸಿರುವ ಈ ಸೈ–ಫೈ ಸಿನಿಮಾ ಇದೇ ಹೆಸರಿನ ವಿಡಿಯೊ ಗೇಮ್ ಸರಣಿಯನ್ನು ಆಧರಿಸಿದ್ದು.

ಮಿಲ್ಲಾ ಜೋವೊವಿಚ್, ಟೋನಿ ಜಾ, ಕ್ಲಿಫೊರ್ಡ್ ಹ್ಯಾರಿಸ್, ಮೀಗನ್ ಗುಡ್ ಮೊದಲಾದವರ ಅಭಿನಯವಿದೆ. ರಕ್ಕಸಾಕೃತಿಗಳ ನಡುವೆ ಮನುಷ್ಯ ಜೀವಿಗಳು ಏಗುವ ಫ್ಯಾಂಟಸಿ ಜಗತ್ತನ್ನು ಸೃಷ್ಟಿಸಿ, ಕಥೆ ಹೆಣೆಯಲಾಗಿದೆ. ಅಮೆರಿಕದ ನಾಪತ್ತೆಯಾದ ಯೋಧರನ್ನು ಹುಡಕಲು ಸೇನಾ ಕ್ಯಾಪ್ಟನ್ ನತಾಲೆ ನೇತೃತ್ವದ ತಂಡ ಹೊರಡುತ್ತದೆ. ದಿಢೀರನೆ ಚಂಡಮಾರುತವೊಂದು ಆ ತಂಡವನ್ನು ಹೊತ್ತೊಯ್ಯುತ್ತದೆ. ಆ ನಿಗೂಢ ಜಾಗದಲ್ಲಿ ನಾಪತ್ತೆಯಾದ ಯೋಧರ ಕುರುಹುಗಳು ಸಿಗುತ್ತವೆ. ಅಲ್ಲಿಂದಾಚೆಗೆ ಸವಾಲು–ಜವಾಬು ಶುರು. ಶಿಕಾರಿಗಳು, ರಕ್ಕಸರು, ಸವಾಲುಗಳನ್ನು ಮೀರುವ ನಿಸ್ಸೀಮರು ಎಲ್ಲರನ್ನೂ ಒಳಗೊಂಡ ಈ ಚಿತ್ರಕಥನ 103 ನಿಮಿಷಗಳಲ್ಲಿ ಹೊಸತೇ ಜಗತ್ತನ್ನು ತೋರಿಸುತ್ತದೆ. ಈ ಚಿತ್ರ ಇಂಗ್ಲಿಷ್ ಅಷ್ಟೇ ಅಲ್ಲದೆ ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲೂ ಡಬ್ ಆಗಿ ರಂಜಿಸುತ್ತಿದೆ.